

# ಯಶೋಗಾಥೆ ಮತ್ತು 'ರಾಮಾಚಾರಿ'

ಯಶ್ ನಟನೆಯ 'Mr & Mrs ರಾಮಾಚಾರಿ' ಚಿತ್ರ 2014ರ ಕೊನೆಯ ಚಿತ್ರಗಳಲ್ಲೊಂದಾಗಿ ಕ್ರಿಸ್‌ಮಸ್ ಸಂದರ್ಭದಲ್ಲಿ ತೆರೆಕಾಣುತ್ತಿದೆ. ಯಶ್ ಪಾಲಿಗೀಗ ಮುಟ್ಟಿದ್ದೆಲ್ಲ ಚಿನ್ನ ಎನ್ನುವಂಥ ಕಾಲ. ಹಿಂದಿನ 'ಗೂಗ್ಲಿ', 'ರಾಜಾಹುಲಿ' ಹಾಗೂ 'ಗಜಕೇಸರಿ' ಚಿತ್ರಗಳು ದೊಡ್ಡ ಯಶಸ್ಸು ಗಳಿಸಿದ ಅನುಕೂಲ 'ರಾಮಾಚಾರಿ' ಚಿತ್ರಕ್ಕೆ ಇದ್ದೇ ಇದೆ. ಅಂದಹಾಗೆ, 2014ರಲ್ಲಿ ತೆರೆಕಾಣುತ್ತಿರುವ ಯಶ್ ನಟನೆಯ ಎರಡನೇ ಸಿನಿಮಾ ಇದು. ಮೇ ತಿಂಗಳಲ್ಲಿ ತೆರೆಕಂಡಿದ್ದ 'ಗಜಕೇಸರಿ' ನಿರ್ಮಿಸಿದ್ದ ಜಯಣ್ಣ–ಭೋಗೇಂದ್ರ ಜೋಡಿಯೇ 'ರಾಮಾಚಾರಿ'ಯನ್ನೂ ನಿರ್ಮಿಸಿದ್ದಾರೆ. 'ಗಜಕೇಸರಿ'ಗಿಂತಲೂ ದೊಡ್ಡ ಪ್ರಮಾಣದಲ್ಲಿ 'ರಾಮಾಚಾರಿ'ಯನ್ನು ತೆರೆಕಾಣಿಸುತ್ತಿರುವ ಜಯಣ್ಣ– 'ಯಶ್ ಎಂದರೆ ಯಶಸ್ಸು' ಎಂದು ಬಣ್ಣಿಸುತ್ತಾರೆ.

'ರಾಮಾಚಾರಿ' ಸಿನಿಮಾದ ಹಿಂದೆ ವಿಷ್ಣುವರ್ಧನ್ ಅವರ ನೆರಳಿದೆ. ರಾಮಾಚಾರಿ ಎಂದರೆ ತಕ್ಷಣ ನೆನಪಿಗೆ ಬರುವುದು ಪುಟ್ಟಣ್ಣ ಕಣಗಾಲ್‌ರ 'ನಾಗರಹಾವು' ಚಿತ್ರದ ಕುದಿನೆತ್ತರಿನ ತರುಣ. ದುರ್ಗದ ಬಂಡೆಗಳೊಂದಿಗೆ ಸಮೀಕರಣಗೊಂಡಿದ್ದ ರಾಮಾಚಾರಿಯ ಛಲ–ಸ್ವಾಭಿಮಾನವನ್ನು ವಿಷ್ಣು ಅದ್ಭುತವಾಗಿ ನಿರ್ವಹಿಸಿದ್ದರು. ಈಗ, ವಿಷ್ಣು ಅಭಿಮಾನಿಯೊಬ್ಬನ ರೂಪದಲ್ಲಿ ಹೊಸ ರಾಮಾಚಾರಿ ತೆರೆಗೆ ಬರುತ್ತಿದ್ದಾನೆ. ಚಿತ್ರದಲ್ಲಿ ವಿಷ್ಣುವರ್ಧನ್‌ರ ಹಾವಭಾವಗಳನ್ನು ಯಶ್ ಅನುಕರಿಸುವ ಮೂಲಕ ವಿಷ್ಣು ಅವರನ್ನು ನೆನಪಿಸುವ ಪ್ರಯತ್ನಗಳಿವೆಯಂತೆ. ಈ ಕಾರಣದಿಂದಾಗಿ ವಿಷ್ಣುವರ್ಧನ್ ಅಭಿಮಾನಿಗಳಲ್ಲೂ 'ರಾಮಾಚಾರಿ' ಸಿನಿಮಾ ಕುತೂಹಲ ಕೆರಳಿಸಿದೆ. ಹರಿಕೃಷ್ಣ ಸಂಗೀತ ನಿರ್ದೇಶನದ ಗೀತೆಗಳು ಈಗಾಗಲೇ ಜನಪ್ರಿಯಗೊಂಡಿವೆ. ಒಂದು ಗೀತೆಯನ್ನು ಸ್ವತಃ ಯಶ್ ಹಾಡಿದ್ದಾರೆ.

ಸಂತೋಷ್ ಎನ್ನುವ ಹೊಸ ಪ್ರತಿಭೆ 'ರಾಮಾಚಾರಿ' ಮೂಲಕ ನಿರ್ದೇಶಕನಾಗಿ ಪರಿಚಯಗೊಳ್ಳುತ್ತಿರುವುದು ಕೂಡ ವಿಶೇಷವೇ. ರೀಮೇಕ್ ಸೂತ್ರದ ಬದಲಾಗಿ ಸಂತೋಷ್ ತಮ್ಮದೇ ಆದ ಕಥೆಯನ್ನು ನೆಚ್ಚಿಕೊಂಡಿದ್ದಾರೆ. 'ರಾಕಿ' ಸಿನಿಮಾ ಸಂದರ್ಭದಲ್ಲಿ ಗೆಳೆಯನಾದ ಸಂತೋಷ್ ಬಗ್ಗೆ ಯಶ್‌ಗೆ ಸಾಕಷ್ಟು ನಿರೀಕ್ಷೆಗಳಿವೆ.

ರಾಧಿಕಾ ಪಂಡಿತ್ 'ರಾಮಾಚಾರಿ'ಯ ನಾಯಕಿ. 'ಮೊಗ್ಗಿನ ಮನಸು', 'ಡ್ರಾಮಾ' ಚಿತ್ರಗಳ ನಂತರ ಯಶ್ ಹಾಗೂ ರಾಧಿಕಾ ಒಟ್ಟಾಗಿ ನಟಿಸುತ್ತಿರುವ ಚಿತ್ರವಿದು. 'ರಾಮಾಚಾರಿ' ಗೆದ್ದರೆ ಈ ಜೋಡಿಯದು ಹ್ಯಾಟ್ರಿಕ್ ಗೆಲುವಿನ ಸಾಧನೆಯಾಗುತ್ತದೆ.

■ ರಘು

# ಕುಟುಂಬವತ್ಸಲ ವಿಜಯ್!

ಮೈನವಿರೇಳಿಸುವ ಸಾಹಸ ದೃಶ್ಯಗಳ ಸಿನಿಮಾಗಳಿಗೆ ದುನಿಯಾ ವಿಜಯ್ ಹೆಸರುವಾಸಿ. ಅಂತೆಯೇ ಹಾಸ್ಯ ದೃಶ್ಯಗಳನ್ನು ಪೋಷಿಸುವುದರಲ್ಲೂ ಅವರು ಎತ್ತಿದಕೈ. 'ಜಾನಿ ಮೇರಾ ನಾಮ್' ವಿಜಯ್ ಅವರೊಳಗಿನ ಹಾಸ್ಯಮುಖವನ್ನು ಪರಿಚಯಿಸಿದ ಸಿನಿಮಾ. 'ಜಂಗ್ಲಿ' ಚಿತ್ರದಲ್ಲೂ ಅವರು ಅಭಿಮಾನಿಗಳಿಗೆ ಕಚಗುಳಿ ಇಟ್ಟಿದ್ದರು. ಈ ಸಾಲಿಗೆ ಹೊಸ ಸೇರ್ಪಡೆ– 'ಜಾಕ್ಸನ್'.



2015ರ ಹೊಸ ವರ್ಷದ ಸಂಕ್ರಾಂತಿ ಸಂದರ್ಭದಲ್ಲಿ 'ಜಾಕ್ಸನ್' ಚಿತ್ರ ತೆರೆಕಾಣುತ್ತಿದೆ. ವಿಜಯ್ ಹೇಳುವಂತೆ, 'ಇದೊಂದು ಕಾಮಿಡಿ ಎಂಟರ್‌ಟೈನರ್'. ಹಾಡು, ಕುಣಿತ, ತಮಾಷೆ, ಭಾವುಕತೆಯ ಜೊತೆಗೆ ಉಪ್ಪಿನಕಾಯಿಯಂತೆ ಹೊಡೆದಾಟದ ದೃಶ್ಯಗಳೂ ಚಿತ್ರದಲ್ಲಿ ಇವೆಯಂತೆ. 'ಕೌಟುಂಬಿಕ ಪ್ರೇಕ್ಷಕರಿಗೂ ಸಿನಿಮಾ ಸಿಕ್ಕಾಪಟ್ಟೆ ರುಚಿಸಲಿದೆ' ಎನ್ನುವುದು ವಿಜಿ ಆತ್ಮವಿಶ್ವಾಸ.

ಸನತ್‌ಕುಮಾರ್ 'ಜಾಕ್ಸನ್' ಚಿತ್ರದ ನಿರ್ದೇಶಕರು. ಸಂಕಲನಕಾರರಾಗಿ ಹೆಸರು ಮಾಡಿರುವ ಸನತ್, 'ಜಾಕ್ಸನ್' ಮೂಲಕ ನಿರ್ದೇಶಕರಾಗಿದ್ದಾರೆ. ತಮಿಳಿನ 'ಇದರ್ ಕುಥನ್ ಆಸೈಪಟ್ಟೆ ಬಾಲಕುಮಾರ' ಚಿತ್ರವನ್ನು 'ಜಾಕ್ಸನ್' ಹೆಸರಿನಲ್ಲಿ ಕನ್ನಡಕ್ಕೆ ತಂದಿರುವ ಅವರು, ಮೂಲಚಿತ್ರಕ್ಕಿಂತಲೂ ಕನ್ನಡ ಚಿತ್ರವನ್ನು ಹೆಚ್ಚು ಕಲರ್‌ಫುಲ್ ಮಾಡಿದ್ದಾರಂತೆ. ವಿಜಯ್‌ಗೆ ಜೋಡಿಯಾಗಿ ಪಾವನಿ ನಟಿಸಿದ್ದಾರೆ. ನಾಯಕ – ನಾಯಕಿ ನಡುವಣ ಸನ್ನಿವೇಶಗಳು ಪ್ರೇಕ್ಷಕರನ್ನು ರಂಜಿಸಲಿವೆ ಎನ್ನುತ್ತಾರೆ ಸನತ್.